ಕರ್ನಾಟಕ ಸರ್ಕಾರ
ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ
ವಾರ್ತಾ ಸೌಧ, ಸಂಖ್ಯೆ 17, ಭಗವಾನ್ ಮಹಾವೀರ ರಸ್ತೆ, ಬೆಂಗಳೂರು – 560 001.

**ಸಂಖ್ಯೆ : ವಾಇ : ಉನಿ : ಸುಮಪ : 2018–19 :** **ದಿನಾಂಕ : 19–09–2018**

## ಪತ್ರಿಕಾ ಆಮಂತ್ರಣ

1. Foundation Stone laying Ceremony for PET CT and Inauguration of Apheresis machine by:

D.K. Shivakumar,
Minister for Irrigation and Medical Education

Chief Guest:
Smt. Manjula, V. IAS.,
Additional Chief Secretary, Health and Family Welfare Department, Medical Education

Guest of Honour:
Dr. C. N. Manjunath,
Director, Sri Jayadeva Institute of Cardiovascular diseases and Research Centre.

Date: 20-09-2018, Thurdsday, Time: 11.00 a.m.
Venue: Kidwar Cancer Institute
Dr. M.H. Marigowda Road, Bengalure -29.

2. ವಿಧಾನ ಪರಿಷತ್ ನೂತನ ಸದಸ್ಯರ ಪ್ರಮಾಣ ವಚನ ಸ್ವೀಕಾರ ಸಮಾರಂಭ:

ಸುನೀಲಗೌಡ ಬಸನಗೌಡ ಪಾಟೀಲ, ವಿಜಯಪುರ ಸ್ಥಳೀಯ ಸಂಸ್ಥೆಗಳ ಕ್ಷೇತ್ರ.

ದಿನಾಂಕ: 20–09–2019, ಗುರುವಾರ, ಸಮಯ: ಬೆಳಿಗ್ಗೆ 11.00 ಗಂಟೆಗೆ
ಸ್ಥಳ: ಕೊಠಡಿ ಸಂಖ್ಯೆ 117, ಮೊದಲನೇ ಮಹಡಿ, ವಿಧಾನ ಸೌಧ, ಬೆಂಗಳೂರು

ಸಂಖ್ಯೆ:1011/1111

# ಪತ್ರಿಕಾ ಪ್ರಕಟಣೆ

## ಆನ್‌ಲೈನ್ ಮೂಲಕ ಸಕಾಲ ಸೇವೆ ಹಾಗೂ ಕನ್ನಡೇತರರು ಕನ್ನಡ ಕಲಿಯಲು ನೂತನ ವೆಬ್‌ಸೈಟ್ ಉದ್ಘಾಟನೆ

**ಬೆಂಗಳೂರು, ಸೆಪ್ಟೆಂಬರ್ 19 (ಕರ್ನಾಟಕ ವಾರ್ತೆ)**

ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಕನ್ನಡೇತರರು ಕನ್ನಡ ಕಲಿಯಲು ಅನುಕೂಲವಾಗುವಂತೆ ನೂತನವಾಗಿ ಅಭಿವೃದ್ಧಿ ಪಡಿಸಿರುವ ವೆಬ್‌ಸೈಟ್ ಹಾಗೂ ಇಲಾಖೆಯ ಆನ್‌ಲೈನ್ ಸಕಾಲ ಸೇವೆಗೆ ಇಂದು ಕನ್ನಡ ಮತ್ತು ಸಂಸ್ಕೃತಿ ಹಾಗೂ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ ಸಚಿವೆ ಡಾ: ಜಯಮಾಲ ರಾಮಚಂದ್ರ ಅವರು ಚಾಲನೆ ನೀಡಿದರು.

ನಂತರ ಪತ್ರಕರ್ತರೊಂದಿಗೆ ಮಾತನಾಡಿದ ಅವರು ಇದೇ ಮೊಟ್ಟ ಮೊದಲ ಬಾರಿಗೆ ಸಕಾಲ ಸೇವೆಯನ್ನು ಆನ್‌ಲೈನ್ ಮೂಲಕ ತರಲಾಗಿದೆ. ಇದರಿಂದ ಆಡಳಿದಲ್ಲಿ ಪಾರದರ್ಶಕತೆ ಬರುವುದಲ್ಲದೆ, ಜನರಿಗೆ ಸುಲಭದಲ್ಲಿ ಸೇವೆಗಳು ಲಭ್ಯವಾಗಲಿವೆ ಎಂದರು.

ಕನ್ನಡೇತರರಿಗೆ ಕನ್ನಡ ಕಲಿಸಲು www.kannadakalike.org ಯನ್ನು ದೆಹಲಿಯ ಜವಾಹರಲಾಲ್ ನೆಹರೂ ವಿಶ್ವವಿದ್ಯಾಲಯ ರೂಪಿಸಿದ್ದು, ಇದರಿಂದ ಜನರು ಕಷ್ಟವಿಲ್ಲದೆ ಕನ್ನಡ ಕಲಿಯಬಹುದಾಗಿದೆ. ಇದರಲ್ಲಿ ಪದ್ಯ, ಹಾಡು, ನಿರೂಪಣೆ, ಅನುಕರಣೆ ಇದ್ದು ಇದರಲ್ಲಿ ಒಟ್ಟು 30 ವಿಡಿಯೊಗಳನ್ನು ಬಳಸಲಾಗಿದೆ. ಅಲ್ಲದೆ, ಕನ್ನಡ ವ್ಯಾಕರಣ, ನೂತನ ಭಾಷಾ ಕಲಿಕೆ ವಿಧಾನದಿಂದ ಭಾಷೆಯನ್ನು ಸುಲಭವಾಗಿ ಕಲಿಯಬಹುದು. ಇದಕ್ಕೆ ಇಲಾಖೆ 30 ಲಕ್ಷ ಅನುದಾನ ಈಗಾಗಲೇ ನೀಡಿದ್ದು, ಇನ್ನೂ ಹೆಚ್ಚು ಅನುದಾನಕ್ಕೆ ಪ್ರಸ್ತಾವನೆ ಸಲ್ಲಿಸಲಾಗುವುದೆಂದರು.

ಕಾರ್ಯಕ್ರಮದಲ್ಲಿ ಮಾತನಾಡಿದ ದೆಹಲಿಯ ಜವಾಹರಲಾಲ್ ನೆಹರೂ ವಿಶ್ವವಿದ್ಯಾಲಯದ ಕನ್ನಡ ವಿಭಾಗದ ಮುಖ್ಯಸ್ಥರಾದ ಡಾ: ಪುರುಷೋತ್ತಮ ಬಿಳಿಮಲೆ ಮಾತನಾಡಿ 2015 ರಿಂದ ಕನ್ನಡ ಪೀಠವು ಅಸ್ತಿತ್ವದಲ್ಲಿದ್ದು, ಕನ್ನಡ ಮೇರುಕೃತಿಗಳಾದ

ಕವಿರಾಜಮಾರ್ಗ, ವಡ್ಡಾರಾದನೆ ಹಾಗೂ ಗದಾಯುದ್ಧವನ್ನು ಇಂಗ್ಲೀಷ್‌ಗೆ ಅನುವಾದ ಮಾಡಿ ಯಶಸ್ವಿಯಾಗಿದೆ.

ಕನ್ನಡೇತರರಿಗೆ ಕನ್ನಡ ಕಲಿಸುವ ನಿಟ್ಟಿನಲ್ಲಿ ಕನ್ನಡ ಕಲಿಕೆ ವೆಬ್‌ಸೈಟ್‌ನಲ್ಲಿ ಜನರಿಗೆ ಅರ್ಥವಾಗುವ ಸುಲಭ ರೀತಿಯಲ್ಲಿ ಕನ್ನಡ ಕಲಿಕೆಯ ಪಠ್ಯ ರೂಪಿಸಲಾಗಿದೆ. ಇದರಲ್ಲಿ ಕರ್ನಾಟಕ ಇತಿಹಾಸ, ಜಾನಪದ ಸಾಹಿತ್ಯ, ವರ್ತಮಾನ, ರಂಗಭೂಮಿ, ಉದ್ಯಮ, ಮಾರುಕಟ್ಟೆ, ಕೃಷಿ, ಆಹಾರ, ಉಡುಗೆ, ತೊಡುಗೆ, ಚಿತ್ರಕಲೆ, ಭೌಗೋಳಿಕತೆ ಮುಂತಾದ ವಿಷಯಗಳನ್ನು ಸೇರಿಸಲಾಗಿದೆ. ಹಿಂದಿ, ಉರ್ದುವನ್ನು ಹೊರತುಪಡಿಸಿದರೆ ಬೇರಾವ ಭಾಷೆಯಲ್ಲೂ ಇಂತಹ ಪ್ರಯೋಗಗಳು ನಡೆದಿಲ್ಲ ಎಂದರು.

ಕಾರ್ಯಕ್ರಮದಲ್ಲಿ ಕನ್ನಡ ಮತ್ತು ಸಂಸ್ಕೃತಿ, ವಾರ್ತಾ ಮತ್ತು ಸಾರ್ವಜನಿಕ ಇಲಾಖೆ ನಿರ್ದೇಶಕ ಎನ್.ಆರ್. ವಿಶುಕುಮಾರ್ ಸೇರಿದಂತೆ ಇಲಾಖೆಯ ಹಿರಿಯ ಅಧಿಕಾರಿಗಳು ಉಪಸ್ಥಿತರಿದ್ದರು.

**ಸಂಖ್ಯೆ:1012/1112**

## ಎಸಿಬಿ ದಾಳಿ

**ಬೆಂಗಳೂರು, ಸೆಪ್ಟೆಂಬರ್ 19 (ಕರ್ನಾಟಕ ವಾರ್ತೆ)**

ಶಿವಮೊಗ್ಗ ತಾಲ್ಲೂಕು, ಕುಂಸಿ ಗ್ರಾಮದ ವಾಸಿಯಾದ ಫಿರ್ಯಾದಿಯೊಬ್ಬರು ತಮ್ಮ ಜಮೀನಿನ ಇ-ಸ್ವತ್ತು ಮಾಡಿಕೊಡಲು ಅರ್ಜಿ ಸಲ್ಲಿಸಿರುತ್ತಾರೆ. ಶ್ರೀ ಲೋಹಿತ್, ಸರ್ವೇಯರ್, ತಾಲ್ಲೂಕು ಕಛೇರಿ ಶಿವಮೊಗ್ಗ ಇವರು ಜಮೀನಿನ ಇ-ಸ್ವತ್ತು ಮಾಡಿಕೊಡಲು ರೂಪಾಯಿ 5000/- ಲಂಚದ ಹಣಕ್ಕೆ ಬೇಡಿಕೆ ಇಟ್ಟಿರುತ್ತಾರೆ.

ದಿನಾಂಕ: 18-09-2018 ರಂದು ಶ್ರೀ ಲೋಹಿತ್ ಇವರು ದೂರುದಾರರಿಂದ ರೂ. 5,000/- ಲಂಚದ ಹಣವನ್ನು ಸ್ವೀಕರಿಸುತ್ತಿದ್ದ ಸಂದರ್ಭದಲ್ಲಿ ಶಿವಮೊಗ್ಗ ಭ್ರಷ್ಟಾಚಾರ ನಿಗ್ರಹ ದಳದ ಅಧಿಕಾರಿಗಳು ನಡೆಸಿದ ಕಾರ್ಯಾಚರಣೆಯಲ್ಲಿ ಸಿಕ್ಕಿಬಿದ್ದಿರುತ್ತಾರೆ. ಇವರನ್ನು ದಸ್ತಗಿರಿ ಮಾಡಿ ಲಂಚದ ಹಣವನ್ನು ವಶಪಡಿಸಿಕೊಳ್ಳಲಾಗಿದೆ, ಪ್ರಕರಣದ ತನಿಖೆ ಮುಂದುವರೆದಿದೆ ಎಂದು ಪ್ರಕಟಣೆ ತಿಳಿಸಿದೆ.

**ಸಂಖ್ಯೆ:1013/1113**

# ACB Raid

Bengaluru, September, 19 (Karnataka Information)

A resident of Kumsi Village, Shivamogga Taluk, had applied for E-Swathu, Sri.Lohith, Surveyor, Taluk office Shivamogga had demanded a bribe of Rs. 5000/- to do the same.

Today the officials of ACB Shivamogga District have trapped and arrested Sri.Lohit, while accepting the bribe amount of Rs. 5000/- from the complainant. The bribe amount is seized. The case is under investigation says official press release.

**ಸಂಖ್ಯೆ:1014/1114**

## ಪೊಲೀಸ್, ಸಬ್-ಇನ್ಸ್‌ಪೆಕ್ಟರ್ ನೇರ ನೇಮಕಾತಿ ಪ್ರಕ್ರಿಯೆಗೆ ಲಿಖಿತ ಪರೀಕ್ಷೆ

ಬೆಂಗಳೂರು, ಸೆಪ್ಟೆಂಬರ್ 19 (ಕರ್ನಾಟಕ ವಾರ್ತೆ)

2016 ನೇ ಸಾಲಿನ ಪೊಲೀಸ್, ಸಬ್-ಇನ್ಸ್‌ಪೆಕ್ಟರ್ ವೈರ್‌ಲೆಸ್ (ಪುರುಷ ಮತ್ತು ಮಹಿಳೆ) ನೇರ ನೇಮಕಾತಿ ಪ್ರಕ್ರಿಯೆಗೆ ಸಂಬಂದಿಸಿದಂತೆ ಅರ್ಜಿ ಸಲ್ಲಿಸಿರುವ ಅಭ್ಯರ್ಥಿಗಳಿಗೆ ಸೆಪ್ಟೆಂಬರ್ 23 ರಂದು ಮಧ್ಯಾಹ್ನ 2.00 ರಿಂದ 3.30 ಗಂಟೆವರೆಗೆ ಹಾಗೂ 4.00 ರಿಂದ 5.30 ಗಂಟೆವರೆಗೆ Govt. RC, Commerce and Management College, Palace Road, Bengaluru ಇಲ್ಲಿ ಲಿಖಿತ ಪರೀಕ್ಷೆಯನ್ನು ನಿಗದಿಪಡಿಸಲಾಗಿರುತ್ತದೆ. ಅರ್ಹ ಅಭ್ಯರ್ಥಿಗಳು ವೆಬ್‌ಸೈಟ್ www.ksp.gov.in ನಿಂದ ಲಿಖಿತ ಪರೀಕ್ಷೆಯ ಕರೆಪತ್ರವನ್ನು ಡೌನ್‌ಲೋಡ್ ಮಾಡಿಕೊಂಡು ಪರೀಕ್ಷೆಗೆ ಹಾಜರಾಗಬಹುದಾಗಿದೆ ಎಂದು ಪ್ರಕಟಣೆ ತಿಳಿಸಿದೆ.

**ಸಂಖ್ಯೆ:1015/1115**

## 328 ವಿವಿಧ ಸಂಯೋಜಿತ ಔಷಧಗಳ ತಯಾರಿಕೆ, ಮಾರಾಟ ಮತ್ತು ವಿತರಣೆಗೆ ನಿಷೇಧ

ಬೆಂಗಳೂರು, ಸೆಪ್ಟೆಂಬರ್ 19 (ಕರ್ನಾಟಕ ವಾರ್ತೆ)

ಕೇಂದ್ರ ಸರ್ಕಾರವು ಔಷಧ ಮತ್ತು ಕಾಂತಿವರ್ಧಕಗಳ ಅಧಿನಿಯಮದಂತೆ 328 ವಿವಿಧ ಸಂಯೋಜಿತ ಔಷಧಗಳ ತಯಾರಿಕೆ, ಮಾರಾಟ ಮತ್ತು ವಿತರಣೆಯನ್ನು ಸೆಪ್ಟೆಂಬರ್ 7 ರಿಂದ ತಕ್ಷಣದಿಂದ ಜಾರಿಯಾಗುವಂತೆ ನಿಷೇಧಿಸಿರುತ್ತಾರೆ.

ಸದರಿ ನಿಷೇಧಿತ ಔಷಧಿಗಳ ವಿವರಗಳು ಔಷಧ ನಿಯಂತ್ರಣ ಇಲಾಖೆಯ ಅಂತರ್ಜಾಲ http://drugs.kar.nic.in ನಲ್ಲಿ ಲಭ್ಯವಿರುತ್ತದೆ.

ಕರ್ನಾಟಕ ರಾಜ್ಯದಲ್ಲಿರುವ ಔಷಧ ತಯಾರಕರು 328 ವಿವಿಧ ಔಷಧಗಳ ತಯಾರಿಕೆಯನ್ನು ತಕ್ಷಣ ನಿಲ್ಲಿಸುವಂತೆ ಮತ್ತು ಈ ಹಿಂದೆ ತಯಾರಿಸಿದ ಸದರಿ ಔಷಧಗಳನ್ನು ವಿತರಣಾ ಸರಪಳಿಯಿಂದ ಈ ಕೂಡಲೇ ಹಿಂಪಡೆಯುವಂತೆ ಸೂಚಿಸಲಾಗಿದೆ.

ಎಲ್ಲಾ ಔಷಧ ವ್ಯಾಪಾರಿಗಳು ಈ 328 ವಿವಿಧ ಔಷಧಗಳ ಮಾರಾಟವನ್ನು ತಡೆಹಿಡಿಯಲು ಮತ್ತು ಅವರ ಕಾರ್ಯವ್ಯಾಪ್ತಿಯ ಔಷಧ ಪರಿವೀಕ್ಷಕರು/ಸಹಾಯಕ ಔಷಧ ನಿಯಂತ್ರಕರು/ಉಪ ಔಷಧ ನಿಯಂತ್ರಕರವರೆಗೆ ಮಾಹಿತಿ ನೀಡಲು ಸೂಚಿಸಲಾಗಿದೆ.

ಎಲ್ಲಾ ವೈದ್ಯರು, ನರ್ಸಿಂಗ್ ಹೋಮ್‌ಗಳು ಮತ್ತು ಆಸ್ಪತ್ರೆಗಳು ಸದರಿ ನಿಷೇಧಿತ ಔಷಧಗಳಿಗೆ ಸಲಹಾ ಚೀಟಿಯನ್ನು ನೀಡುವುದು ಮತ್ತು ಉಪಯೋಗಿಸುವದನ್ನು ಈ ಕೂಡಲೇ ನಿಲ್ಲಿಸಲು ಕೋರಲಾಗಿದೆ ಹಾಗೂ ಸಾರ್ವಜನಿಕರು ಈ ಔಷಧಗಳನ್ನು ಉಪಯೋಗಿಸಕೂಡದು ಎಂದು ಈ ಮೂಲಕ ಮಾಹಿತಿ ನೀಡಲಾಗಿದೆ ಎಂದು ಅಪರ ಔಷಧ ನಿಯಂತ್ರಕರು ಪ್ರಕಟಣೆಯಲ್ಲಿ ತಿಳಿಸಿದರು.

**ಸಂಖ್ಯೆ:1016/1116**

## "ಖಗೋಳ ಶಾಸ್ತ್ರ" ಕುರಿತ ಕಮ್ಮಟ

ಬೆಂಗಳೂರು, ಸೆಪ್ಟೆಂಬರ್ 19 (ಕರ್ನಾಟಕ ವಾರ್ತೆ)

ಶಾಲಾ ಶಿಕ್ಷಕರು, ವಿಜ್ಞಾನ ಸಂವಹನಕಾರರು ಮತ್ತು ಖಗೋಳಾಸಕ್ತರಿಗಾಗಿ ಜವಾಹರ್ ಲಾಲ್ ನೆಹರು ತಾರಾಲಯವು ಕಮ್ಮಟವನ್ನು ಏರ್ಪಡಿಸಿದೆ.

ಭಾಷಾ ಮಾಧ್ಯಮ ಕನ್ನಡ, ಕಮ್ಮಟದ ಮೊದಲ ಭಾಗ ಸೆಪ್ಟೆಂಬರ್ 26 ರಿಂದ 28 ರವರೆಗೆ ಬೆಳಿಗ್ಗೆ 10.30 ರಿಂದ ಸಂಜೆ 7.30 ಗಂಟೆವರೆಗ ನಗರದ ಜವಾಹರ್ ಲಾಲ್ ನೆಹರು ತಾರಾಲಯ, ಶ್ರೀ ಟಿ. ಚೌಡಯ್ಯ ರಸ್ತೆ, ಹೈ ಗ್ರೌಂಡ್ಸ್, ಬೆಂಗಳೂರು – 560 001 ಇಲ್ಲಿ ನಡೆಯಲಿದೆ.

ಎರಡನೆಯ ಭಾಗ ನವೆಂಬರ್‌ನಲ್ಲಿ ನಡೆಯಲಿದೆ. ಆಸಕ್ತರು ಎರಡೂ ಭಾಗಗಳಲ್ಲಿ ಕಡ್ಡಾಯವಾಗಿ ಹಾಜರಿರಬೇಕು. ಬರಿಗಣ್ಣಿನಿಂದ ಆಕಾಶ ಪರಿಚಯ. ಆಕಾಶಕಾಯಗಳ ಚಲನೆಯನ್ನು ತಿಳಿಸಿಕೊಡುವ ಚಟುವಟಿಕೆಗಳು ಮತ್ತು ನಕ್ಷತ್ರ ಫಲಕವನ್ನು ಬಳಸುವ ವಿಧಾನ–ಹೀಗೆ ಖಗೋಳ ವಿಜ್ಞಾನದ ಮೂಲತತ್ವಗಳನ್ನು ತಿಳಿಸಿಕೊಡುವುದು ಈ ಕಮ್ಮಟದ ಉದ್ದೇಶ. ಕ್ಯಾಲೆಂಡರ್ ಪರಿಕಲ್ಪನೆ, ಗ್ರಹಣಗಳು, ಸೌರ ಮಂಡಲದ ಮಾದರಿ ಮುಂತಾದವುಗಳ ಚಾರಿತ್ರಿಕ ಬೆಳವಣಿಗೆಯನ್ನೂ ವಿವರಿಸಲಾಗುವುದು.

ಕಮ್ಮಟದಲ್ಲಿ ಭಾಗವಹಿಸಲು ಇಚ್ಛಿಸುವವರು ದಿನಾಂಕ: ಸೆಪ್ಟೆಂಬರ್ 23ರ ರೊಳಗೆ ಕಚೇರಿಯಲ್ಲಿ ನೋಂದಾಯಿಸಿಕೊಳ್ಳಬಹುದು. ಮೊದಲು ಬಂದವರಿಗೆ ಆದ್ಯತೆ. ಒಟ್ಟು 30 ಅಭ್ಯರ್ಥಿಗಳಿಗೆ ಅವಕಾಶ. ಭಾಗವಹಿಸುವವರಿಗೆ ಯಾವುದೇ ಭತ್ಯೆಯನ್ನು ನೀಡಲಾಗುವುದಿಲ್ಲ.

ಹೆಚ್ಚಿನ ವಿವರಗಳಿಗಾಗಿ ದೂರವಾಣಿ ಸಂಖ್ಯೆ 2227 9725/222 6084 ಅಥವಾ http://www.taralaya.org/ ಅನ್ನು ಸಂಪರ್ಕಿಸಬಹುದಾಗಿದೆ ಎಂದು ಪ್ರಕಟಣೆ ತಿಳಿಸಿದೆ.

**ಸಂಖ್ಯೆ:1017/1117**

## <u>ವೃತ್ತಿಪರ ಶಿಕ್ಷಣಕ್ಕಾಗಿ ಅರ್ಜಿ ಆಹ್ವಾನ</u>

ಬೆಂಗಳೂರು, ಸೆಪ್ಟೆಂಬರ್ 19 (ಕರ್ನಾಟಕ ವಾರ್ತೆ)

ನಗರದ ಹೊಸೂರು ರಸ್ತೆಯಲ್ಲಿರುವ ಸರ್ಕಾರಿ ಮಾದರಿ ಕೈಗಾರಿಕಾ ತರಬೇತಿ ಸಂಸ್ಥೆ 2018–19 ನೇ ಶೈಕ್ಷಣಿಕ ಸಾಲಿನಲ್ಲಿ ವಿವಿಧ ವೃತ್ತಿಪರ ಶಿಕ್ಷಣದ ಖಾಲಿ ಇರುವ ಕೆಲವು ಸ್ಥಾನಗಳಿಗೆ ಹೆಚ್ಚುವರಿ ಸುತ್ತಿನಲ್ಲಿ ಪ್ರವೇಶಕ್ಕಾಗಿ ಅರ್ಜಿ ಆಹ್ವಾನಿಸಿದೆ.

NCVT – Computer Operator Programming Assistant (1year Trade) NCVT – Dance Making ( 1 year Trade) NCVT – Welder ( 1 year Trade) NCVT – Draughtsman Civil (2 years Trade) NCVT – Draughtsman Mechanic (2 years Trade) NCVT – Information Communication Technology System Maintenance (2 years Trade) NCVT – Machinist (2years Trade) NCVT – Tool and Die Maker (Jigs & Fixture) (2years Trade) NCVT – Turner (2 years Trade)

ಒಂದು ವರ್ಷದ ವೃತ್ತಿ ಶಿಕ್ಷಣ ಕೋರ್ಸಿಗೆ ರೂ. 1,500/- ಹಾಗೂ ಎರಡು ವರ್ಷದ ವೃತ್ತಿ ಶಿಕ್ಷಣ ಕೋರ್ಸಿಗೆ ರೂ. 1,750/- ರೂ. ಪ್ರವೇಶದ ಬೋಧನಾ ಮತ್ತು ಪರೀಕ್ಷಾ ಶುಲ್ಕವಾಗಿರುತ್ತದೆ.

ಹೆಚ್ಚಿನ ಮಾಹಿತಿಗಾಗಿ ನೇರವಾಗಿ ಕಚೇರಿ ಅಥವ ಪ್ರಾಚಾರ್ಯರನ್ನು ದೂರವಾಣಿ ಸಂಖ್ಯೆ 080-26562307 ರಲ್ಲಿ ಸಂಪರ್ಕಿಸಬಹುದಾಗಿದೆ ಎಂದು ಪ್ರಕಟಣೆ ತಿಳಿಸಿದೆ.

**ಸಂಖ್ಯೆ:1018/1118**

# ಚಲನಚಿತ್ರ ಪ್ರದರ್ಶನಕ್ಕೆ ಅರ್ಜಿ ಆಹ್ವಾನ

ಬೆಂಗಳೂರು, ಸೆಪ್ಟೆಂಬರ್ 19 (ಕರ್ನಾಟಕ ವಾರ್ತೆ)

ಸಮಾಜ ಕಲ್ಯಾಣ ಇಲಾಖೆಯಿಂದ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದ ನಿರ್ದೇಶಕರು/ನಿರ್ಮಾಪಕರು ನಿರ್ದೇಶಿಸಿ ನಿರ್ಮಿಸಿದ ಸಾಮಾಜಿಕ ಚಲನಚಿತ್ರಗಳನ್ನು ಜಿಲ್ಲಾ ಕೇಂದ್ರಗಳ ಚಲನಚಿತ್ರ ಮಂದಿರಗಳಲ್ಲಿ ಉಚಿತವಾಗಿ ಪ್ರದರ್ಶಿಸಲು ಆಯ್ಕೆ ಮಾಡುವ ಸಲುವಾಗಿ ಅರ್ಜಿಗಳನ್ನು ಆಹ್ವಾನಿಸಲಾಗಿರುತ್ತದೆ.

ಐತಿಹಾಸಿಕ, ಪರಂಪರೆ ಬಿಂಬಿಸುವ, ಅತ್ಯುತ್ತಮ ಮಕ್ಕಳ ಚಲನಚಿತ್ರ, ಉತ್ತಮ ಸಾಹಿತ್ಯ ಕೃತಿಗಳನ್ನು ಸಂಪೂರ್ಣವಾಗಿ ಆಧರಿಸಿದ, ರಾಜ್ಯ/ರಾಷ್ಟ್ರ ಪ್ರಶಸ್ತಿ ಪಡೆದ ಮತ್ತು ಅಂತರಾಷ್ಟ್ರೀಯ ಚಲನಚಿತ್ರೋತ್ಸವದಲ್ಲಿ ಪ್ರದರ್ಶನಗೊಂಡ ಹಾಗೂ ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ ನೀಡುವ ಸಹಾಯಧನಕ್ಕೆ ಅರ್ಹತೆ ಇರುವ ಚಲನಚಿತ್ರಗಳನ್ನು ಪರಿಗಣಿಸಲಾಗುವುದು.

ಅರ್ಜಿ ನಮೂನೆಯನ್ನು ಆಯಾ ಜಿಲ್ಲೆಯ ಜಂಟಿ/ಉಪ ನಿರ್ದೇಶಕರ ಕಚೇರಿ, ಸಮಾಜ ಕಲ್ಯಾಣ ಇಲಾಖೆ ಇವರಿಂದ ಪಡೆಯಬಹುದಾಗಿದೆ.

ಭರ್ತಿಮಾಡಿದ ಅರ್ಜಿಯನ್ನು ದಿನಾಂಕ: 31-10-2018 ರ ಒಳಗಾಗಿ ಅಯುಕ್ತರು, ಸಮಾಜ ಕಲ್ಯಾಣ ಇಲಾಖೆ, 5ನೇ ಮಹಡಿ, ಬಹುಮಹಡಿಗಳ ಕಟ್ಟಡ, ಅಂಬೇಡ್ಕರ್ ವೀಧಿ, ಬೆಂಗಳೂರು – 560001 ಇವರಿಗೆ ಸಲ್ಲಿಸಲು ಪ್ರಕಟಣೆ ತಿಳಿಸಿದೆ.

**ಸಂಖ್ಯೆ:1019/1119**

# ಸಾರ್ವಜನಿಕರು ಅರ್ಜಿಗಳನ್ನು ರಾಜ್ಯ ವಿಧಾನಸಭೆಗೆ ನೀಡಲು

# ಹೊಸ ನಿಯಮ.

ಬೆಂಗಳೂರು, ಸೆಪ್ಟೆಂಬರ್ 19 (ಕರ್ನಾಟಕ ವಾರ್ತೆ)

ರಾಜ್ಯ ವಿಧಾನಸಭೆಯ ಅರ್ಜಿಗಳ ಸಮಿತಿಗೆ ಸಾರ್ವಜನಿಕರು ತಮ್ಮ ಸಮಸ್ಯೆಗಳ ಕುರಿತು ಅರ್ಜಿ ಸಲ್ಲಿಸುವಾಗ ಅನುಸರಿಸಬೇಕಾದ ನಿಯಮಗಳ ಕುರಿತು ರಾಜ್ಯ ವಿಧಾನಸಭೆ ಸಚಿವಾಲಯ ಪ್ರಕಟಣೆ ಹೊರಡಿಸಿದೆ.

ಸಾರ್ವಜನಿಕ/ಸಾರ್ವತ್ರಿಕವಾಗಿ ಯಾವುದಾದರೂ ಸಮಸ್ಯೆಗಳಿದ್ದಲ್ಲಿ ಅಂತಹ ಸಮಸ್ಯೆ/ತೊಂದರೆಯ ಕುರಿತು ನಿಯಮಾನುಸಾರವಾದ ನಿಬಂಧನೆಗೊಳಪಟ್ಟು ಸಾರ್ವಜನಿಕರು ಅರ್ಜಿಗಳನ್ನು ಸಲ್ಲಿಸಬಹುದಾಗಿದೆ.

ಅರ್ಜಿಯು ಸಾರ್ವಜನಿಕವಾಗಿರಬೇಕು, ಅರ್ಜಿಯನ್ನು ಸಲ್ಲಿಸುವವರ ಪೂರ್ಣ ಹೆಸರು, ವಿಳಾಸ ಹಾಗೂ ಸಾರ್ವಜನಿಕರುಗಳು ಸಹಿ ಹಾಕಿರಬೇಕು.

ಅರ್ಜಿಯು ಯಾವ ಸಮಸ್ಯೆಗೆ ಸಂಬಂಧಿಸಿದೆಯೋ ಅದರ ಬಗ್ಗೆ ಮಾಹಿತಿಯು ಸ್ಪಷ್ಟವಾಗಿರಬೇಕು. ಕನ್ನಡ ಮತ್ತು ಆಂಗ್ಲ ಭಾಷೆಯಲ್ಲಿ ಮಾತ್ರ ಸಲ್ಲಿಸಬೇಕು.

ಅರ್ಜಿಗೆ ಮಾನ್ಯ ವಿಧಾನಸಭಾ ಸದಸ್ಯರೊಬ್ಬರ ಮೇಲುರುಜು ಹಾಕಿರಬೇಕು.

ಅರ್ಜಿಯು ವೈಯಕ್ತಿಕವಾಗಿರಬಾರದು, ಅಂದರೆ ಒಬ್ಬ ವ್ಯಕ್ತಿಗೆ ಸಂಬಂಧಿಸಿರಬಾರದು. ಅರ್ಜಿಯನ್ನು ಸಲ್ಲಿಸುವ ವಿಳಾಸ/ಕಾರ್ಯದರ್ಶಿ, ಅರ್ಜಿಗಳ ಸಮಿತಿ, ಕರ್ನಾಟಕ ವಿಧಾನಸಭೆ, ವಿಧಾನಸೌಧ, ಬೆಂಗಳೂರು ಎಂದು ನಮೂದಿಸಿರಬೇಕು.

ಶಾಸಕರು ತಮ್ಮ ಕ್ಷೇತ್ರದಲ್ಲಿ ಸಾರ್ವಜನಿಕ ಮಹತ್ವವುಳ್ಳ ಕೆಲಸಕಾರ್ಯಗಳು ಸರ್ಕಾರದ ಮಟ್ಟದಲ್ಲಿ ಸೂಕ್ತ ಸ್ಪಂದನೆ ಸಿಗದೆ, ಬಹಳ ಕಾಲದಿಂದ ನ್ಯಾಯ ದೊರಕದೆ ಬಾಕಿ ಉಳಿದಿದ್ದಲ್ಲಿ, ಆದರಿಂದಾಗಿ ಸಾರ್ವಜನಿಕರಿಗೆ ತೊಂದರೆ ಉಂಟಾಗಿದ್ದಲ್ಲಿ (ನ್ಯಾಯಾಲಯದಲ್ಲಿ ಬಾಕಿ ಇರುವ ಪ್ರಕರಣಗಳನ್ನು ಹೊರತುಪಡಿಸಿ) ಆ ಬಗ್ಗೆ ಶಾಸಕರ ಗಮನಕ್ಕೆ ಬಂದಲ್ಲಿ, ಅಂತಹ ಪ್ರಕರಣಗಳಲ್ಲಿ ಬಾಧಿತರಿಂದ ಅರ್ಜಿ ಪಡೆದು, ಶಾಸಕರ ಮೇಲು ರುಜುವಿನೊಂದಿಗೆ ಅರ್ಜಿಗಳನ್ನು ಕರ್ನಾಟಕ ವಿಧಾನಸಭೆಯ ಕಾರ್ಯವಿಧಾನ ಮತ್ತು ನಡವಳಿಕೆಗಳ ನಿಯಮಾವಳಿಗಳ ನಿಯಮ 141 ರಂತೆ ವಿಧಾನಸಭೆಗೆ ಸಲ್ಲಿಸಬಹುದೆಂದು ತಿಳಿಸಲಾಗಿದೆ.

ಕರ್ನಾಟಕ ವಿಧಾನ ಸಭೆಯ ಕಾರ್ಯವಿಧಾನ ಮತ್ತು ನಡವಳಿಕೆಗಳ ನಿಯಮ 136 ರಿಂದ 144 ರಲ್ಲಿನ ಉಪಬಂಧಗಳಿಗೆ ಒಳಪಟ್ಟು, ವಿಧಾನ ಸಭೆಯ ಅರ್ಜಿಗಳ ಸಮಿತಿಯು ಸಾರ್ವಜನಿಕ ಮಹತ್ವವುಳ್ಳ ಕೆಲಸ ಕಾರ್ಯಗಳು ಸರ್ಕಾರದ ಮಟ್ಟದಲ್ಲಿ ದೀರ್ಘಕಾಲದಿಂದ ಪರಿಹಾರವಾಗದೇ ಇರುವ ಜಟಿಲ ಸಮಸ್ಯೆಗಳಿರುವ ಸಾರ್ವಜನಿಕರು ತೊಂದರೆ ಅನುಭವಿಸುತ್ತಿರುವ ಪ್ರಕರಣಗಳ ಬಗ್ಗೆ (ನ್ಯಾಯಲಯದಲ್ಲಿನ

ಪ್ರಕರಣಗಳು ಹೊರತುಪಡಿಸಿ) ಪರಿಶೀಲನೆ ನಡೆಸಿ, ಸೂಕ್ತ ಪರಿಹಾರೋಪಾಯಗಳೊಂದಿಗೆ ಸರ್ಕಾರಕ್ಕೆ ವರದಿಯನ್ನು ಸಲ್ಲಿಸುತ್ತದೆ ಎಂದು ಕರ್ನಾಟಕ ವಿಧಾನಸಭೆ ಸಚಿವಾಲಯದ ಪ್ರಕಟಣೆ ತಿಳಿಸಿದೆ.

**ಸಂಖ್ಯೆ:1012/1112**

# ಎಸಿಬಿ ಸಭೆ

ಬೆಂಗಳೂರು, ಸೆಪ್ಟೆಂಬರ್ 19 (ಕರ್ನಾಟಕ ವಾರ್ತೆ)

ಭ್ರಷ್ಟಾಚಾರ ನಿಗ್ರಹ ದಳ, ಬೆಂಗಳೂರು ನಗರ ವಿಭಾಗದ ವತಿಯಿಂದ ಸಾರ್ವಜನಿಕ ಸಂಪರ್ಕ ಸಭೆಯನ್ನು ಜಂಟಿ ಆಯುಕ್ತರ ಕಛೇರಿ, ಬಿಬಿಎಂಪಿ ರಾಜರಾಜೇಶ್ವರಿ ನಗರ ವಲಯ, ರಾಜರಾಜೇಶ್ವರಿ ನಗರ, ಬೆಂಗಳೂರು ಇಲ್ಲಿ ದಿನಾಂಕ; 20-09-2018 ರಂದು ಬೆಳಗ್ಗೆ 11.00 ಗಂಟೆಯಿಂದ ಸಂಜೆ 4.00 ಗಂಟೆಯ ವರೆಗೆ ಆಯೋಜಿಸಲಾಗಿದೆ.

ಭ್ರಷ್ಟಾಚಾರ ನಿಗ್ರಹ ದಳ, ಬೆಂಗಳೂರು ನಗರ ವಿಭಾಗದ ಅಧಿಕಾರಿ ಮತ್ತು ಸಿಬ್ಬಂದಿ ಈ ಸಭೆಯಲ್ಲಿ ಹಾಜರಿದ್ದು, ಸಾರ್ವಜನಿಕರಿಂದ ಸರ್ಕಾರದ ಕೆಲಸಗಳಲ್ಲಿ ಭ್ರಷ್ಟಾಚಾರಕ್ಕೆ ಸಂಬಂಧಪಟ್ಟ ದೂರು ಅರ್ಜಿಗಳನ್ನು ಸ್ವೀಕರಿಸಲಿದ್ದಾರೆ. ಸಾರ್ವಜನಿಕರು ಈ ಸಭೆಗೆ ಹಾಜರಾಗಿ ತಮ್ಮ ದೂರುಗಳನ್ನು ನೀಡಬಹುದಾಗಿದೆ.

ಹೆಚ್ಚಿನ ಮಾಹಿತಿಗಾಗಿ ಶ್ರೀ.ಶಿವಶಂಕರ ರೆಡ್ಡಿ.ಬಿ, ಪೊಲೀಸ್ ಉಪಾಧೀಕ್ಷಕರು, (ಮೊಬೈಲ್ ನಂ.9480806213) ಮತ್ತು ಶ್ರೀ.ಎಂ.ಎಲ್.ಸುಬ್ರಮಣ್ಯಸ್ವಾಮಿ, ಪೊಲೀಸ್ ನಿರೀಕ್ಷಕರು (ಮೊಬೈಲ್ ನಂ.9480086251) ಇವರನ್ನು ಸಂಪರ್ಕಿಸಲು ಕೋರಲಾಗಿದೆ.